ಬಿಸಿ ಮಾಡಿ ಹಾಕುತ್ತಿದ್ದಳು ಅವರಮ್ಮ. ತರಗತಿ ಪ್ರಾರಂಭವಾಗುತ್ತಿದ್ದಂತೆ ಹೊಟ್ಟೆಯೊಳಗೆ ಕದಲಾಟ ಶುರುವಾಗುತ್ತಿತ್ತು. ಹಾಗೂ ಹೀಗೂ ಸುಮಾರು ಹೊತ್ತಿನವರೆಗೆ ಕಾಲ ಹಾಕುತ್ತಿದ್ದವನಿಗೆ ಧರ್ಮ ಸಂಕಟದ ಸಮಯ ಸನ್ನಿಹಿತವಾಗಿಬಿಡುತ್ತಿತ್ತು. ಒತ್ತಡವನ್ನು ಎಷ್ಟು ಕಾಲ ಕಟ್ಟಿಹಾಕುವುದು? ಸೈಲೆಂಟಾಗಿ ವಾಯುವನ್ನು ಹೊರಹಾಕಲು ಯತ್ನಿಸುತ್ತಿದ್ದ. ಅವನ ಆ ಮುಲುಕಾಟ ನೋಡಿಯೇ ನಮಗೆ ಗೊತ್ತಾಗಿಬಿಡುತ್ತಿತ್ತು, ಬಾಣವೊಂದು ಹೆದೆಯೇರುತ್ತಿದೆ ಎಂದು. ನಾವೆಲ್ಲರೂ ನಮ್ಮ ಕೈಯನ್ನು ಮೂಗು ಬಾಯಿಗಳಿಗದುಮಿಕೊಂಡು ಸ್ವರಕ್ಷಣೆ ಮಾಡಿಕೊಳ್ಳಲು ಸಿದ್ಧವಾಗುತ್ತಿದ್ದ ಹಾಗೇ ಯಾವ ಮಾಯದಲ್ಲೋ ಗಾಳಿ ಕಲುಷಿತಗೊಂಡುಬಿಡುತ್ತಿತ್ತು. ಬರುತ್ತಿದ್ದ ಉಮ್ಮಳಿಕೆಯನ್ನು ಸಾಹಸಪಟ್ಟು ತಡೆದುಕೊಳ್ಳುತ್ತಿದ್ದೆವು.

ನಮ್ಮ ಶ್ರೀಕರನದು ಬೇರೆಯೇ ಟೈಪು. ರಗಳೇಯೇ ಬೇಡ ಎಂದು ತರಗತಿ ನಡೆಯುತ್ತಿದ್ದಾಗಲೇ ಎದ್ದು ನಿಂತು ಮಾಸ್ತರರಿಗೆ ಸಾರ್.. ಎಂದು ಬೆರಳೆತ್ತಿ ಶೌಚಕ್ಕೆ ಕೈ ಮಾಡುತ್ತಿದ್ದ. ಒಳ್ಳೆಯ ಮಾಸ್ತರಾದರೆ ಹೋಗೆಂದು ಕೈಸನ್ನೆ ಮಾಡುತ್ತಿದ್ದರು. ಇವನೂ ನಿರುಮ್ಮಳವಾಗಿ ಹೊರಹೋಗಿ ಸಾವಧಾನದಿಂದ ಒಳಗಿನ ವಾಯುವನ್ನು ಹೊರಗಿನ ಪರಿಸರದಲ್ಲಿ ವಿಲೀನಗೊಳಿಸಿ ತೃಪ್ತನಾಗಿ ಬರುತ್ತಿದ್ದ. ಇಡೀ ಕ್ಲಾಸು ನೆಮ್ಮದಿಯ ನಿಟ್ಟುಸಿರುಬಿಡುತ್ತಿತ್ತು. ಯಾರಾದರೂ ಉರಿಮುಖದ ಮಾಸ್ತರರಾದರೆ, ಯಾಲರ್ಾ ಅದು... ಬರೋವಾಗ್ಲೇ ಎಲ್ಲಾ ಮುಗಿಸಿ ಬರೋಕೇನು ಧಾಡಿ ನಿನಗೆ? ಕ್ಲಾಸು ಮುಗಿಯಾಗಂಟ ಮುಚ್ಕೊಂಡು ಕೂತಿರು... ಅಂದರೆ ಮುಗೀತು. ಮುಲುಕಾಟ ಆರಂಭವಾಗುತ್ತಿತ್ತು. ಪ್ರಸವ ವೇದನೆ ಅನುಭವಿಸುವ ಹೆಣ್ಣಿನಂತೆ ಕೊಸರುತ್ತಿದ್ದ. ಕೊನರುತ್ತಿದ್ದ. ಹೆರಿಗೆ ಮುಗಿಸಿಕೊಂಡ ತೃಪ್ತಿ ಅವನ ಮುಖದಲ್ಲಿ ಕಾಣುತ್ತಿತ್ತೋ ಇಲ್ಲವೋ? ಗೊತ್ತಿಲ್ಲ. ನಮ್ಮ ಫೇಸುಗಳಂತೂ ಗರ್ಭದಿಂದ ಹೊರಬಿದ್ದ ಕಿರು ಗಂಟಲಿನ ರೋದನಾ ಶಿಶುಗಳಂತಾಗುತ್ತಿದ್ದುದು ನಿಜ.

ಇನ್ನೂ ಕೆಲವು ಕಲಾವಿದರಿದ್ದರು. ಅವರು ವಾಯುದೇವ ಮುನಿದ ತಕ್ಷಣ ಸಿಗ್ನಲು ಕೊಡುತ್ತಿದ್ದರು. ಪೃಷ್ಟದ ಅರ್ಧ ಭಾಗವನ್ನು ವಿಲಕ್ಷಣ ರೀತಿಯಲ್ಲಿ ಮೇಲೆತ್ತುತ್ತಿದ್ದರು. ಆ ಭಾವಭಂಗಿ ನೋಡಿಯೇ ನಾವು ಜಾಗರೂಕರಾಗಿ ತಕ್ಷಣ ನಮ್ಮ ನಮ್ಮ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುತ್ತಿದ್ದೆವು. ಹಾಗೂ ಹೀಗೂ ತಿಣುಕಾಡಿ ಉಸಿರುಗಟ್ಟಿ ಸರಕು ಹೊರಬರುವಷ್ಟರಲ್ಲಿ ಏನೇ ಎಚ್ಚರಿಕೆ ತೆಗೆದುಕೊಂಡರೂ ಅದು ಮಾಡುವ ಡ್ಯಾಮೇಜು ಮಾಡಿಯೇ...

'ಗಾಳಿಯನ್ನು ಹಿಡಿಯೋರು.. ಯಾರೂ ಇಲ್ಲ' ಅಂತ ಒಂದು ಜನಪ್ರಿಯ ಚಿತ್ರಗೀತೆಯೇ ಇದೆ. ಅದನ್ನು ಬರೆದ ಸಾಹಿತಿಗಳೂ ಬಹುಶಃ ನಾನು ಮೇಲೆ ಹೇಳಿದ ಎಲ್ಲ ಅನುಭೂತಿಗಳಿಗೆ ಒಳಗಾದವರೆನ್ನುವುದರಲ್ಲಿ ನನಗಾವ ಅನುಮಾನವೂ ಇಲ್ಲ. ಏಕೆಂದರೆ, ಈ ಅಗೋಚರ ವಾಹಿನಿಗೆ ತಡೆಗೋಡೆಯೆಂಬುದಿಲ್ಲ. ಕೆಲಬಾರಿ ಕ್ಲಾಸು ರೂಮಿನಲ್ಲಿ ಆಸ್ಫೋಟಗೊಳ್ಳುತ್ತಿದ್ದ ಸಿಡಿಮದ್ದುಗಳು ಇಡೀ ತರಗತಿಯನ್ನೇ ಆಕ್ರಮಿಸಿಕೊಳ್ಳುತ್ತಿತ್ತೆಂದರೆ ಮುಂದೆ ಕುಳಿತ ಹುಡುಗಿಯರನ್ನು ಮುಟ್ಟುತ್ತಿರಲಿಲ್ಲವೇ? ಆ ಕಡೆಗೂ ನುಗ್ಗುತ್ತಿತ್ತು. ಆ ಅನುಭವ ಪಡೆದಾಕ್ಷಣ ಅವರೊಮ್ಮೆ ಶೀತಲವಾದ ಗಾಳಿಗೆ ಮೈಯೊಡ್ಡಿದಂತೆ ಕುಳಿತಲ್ಲೇ ಬೆಚ್ಚಿ ಬೀಳುತ್ತಿದ್ದರು. ಕ್ರಮೇಣ ಅದರ ತೀವ್ರತೆಗೆ ಒಂದೇ ಭಂಗಿಯಲ್ಲಿರಲಾರದೆ ಕೆಂಪಿರುವೆಯಿಂದ ಕಚ್ಚಿಸಿಕೊಂಡ ತಪಸ್ವಿಯಂತೆ ಕುಳಿತಲ್ಲೇ ಅತ್ತಿತ್ತ ಜರುಗುತ್ತಿದ್ದರು. ಮುಖ ಗಂಟಿಕ್ಕಿ ಒಮ್ಮೆ ಹಿಂದಿರುಗಿ ನೋಡುತ್ತಿದ್ದರು. ತುಟಿಗಳನ್ನು ಪಿಟಪಿಟನೆ ಅದುರಿಸಿ ಅಚಾನಕ್ಕು ಸಂಕಟಕ್ಕೀಡುಮಾಡಿದ ಅನಾಮಿಕ ಕರ್ತೃವಿಗೆ ಶಾಪ ಹಾಕುತ್ತಿದ್ದರು. ಆ ಅಸಹಾಯಕ ಸ್ಥಿತಿಯಲ್ಲಿ ಅದಕ್ಕಿಂತ ಹೆಚ್ಚೇನು ಮಾಡಲು ಶಕ್ಯವಿರಲಿಲ್ಲ.

ಬಾಲ್ಯದಲ್ಲಿ ಕೆಲವು ಗರೀಬು ಜೀವಿ ಗೆಳೆಯರಿದ್ದರು. ಹೃದಯಕ್ಕೆ ಹತ್ತಿರವಿದ್ದ ಅವರು ನನ್ನ ಮಾನಸ ಪಟಲದಲ್ಲಿ ವಿಶೇಷ ಸ್ಥಾನ ಪಡೆದಿದ್ದರು. ಬೆಳಗ್ಗೆ ಎದ್ದ ಕೂಡಲೇ ಮನೆ ಬಳಿ ಬಂದು ಬಾರಲಾ ರವೀ... ಹೈಸ್ಕೂಲು ಗ್ರೌಂಡಿಗೆ ಹೋಗಾನಾ ಅನ್ನುತ್ತಾ ಹಾವಳಿ ಕೊಡುತ್ತಿದ್ದರು. ಬಣ್ಣ ಬಣ್ಣದ ಗೋಲಿಗಳನ್ನು ತೋರಿ ನನ್ನ ಮನಸ್ಸು ಚಂಚಲಗೊಳ್ಳುವಂತೆ ಮಾಡುತ್ತಿದ್ದರು. ಅವರು ಅದೇನು ಚಟುವಟಿಕೆಗಳನ್ನು ಮಾಡುತ್ತಿದ್ದರೋ...? ಮತ್ತು ಅವುಗಳನ್ನು ಕುಂಡೆ ಊರಿಕೊಂಡೇ ಯಾಕೆ ಮಾಡುತ್ತಿದ್ದರೋ? ಅವರ ಚಡ್ಡಿಗಳು ಹರಿಯಬಾರದ ಜಾಗದಲ್ಲಿ ಹರಿದು ತೋರಬಾರದ್ದನ್ನೆಲ್ಲಾ ತೋರಿ ಕಸಿವಿಸಿಗೊಳಿಸುತ್ತಿದ್ದವು.